# IN THE COURT OF THE ADDL. SENIOR CIVIL JUDGE & JMFC., GUBBI

# **OS – 228/2023**

Witness present and duly sworn on : 21.01.2026.

Cross Examination: by Counsel for Plaintiffs :

ನಾನು SSLC ಯವರೆಗೆ ವಿಧಾಭ್ಯಾಸ ಮಾಡಿದ್ದೇನೆ. ನಾನು ಈಗ ಚೀಲನಹಳ್ಳಿಯಲ್ಲಿ ವಾಸ ಇದ್ದೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ಬೆಂಗಳೂರಿನಲ್ಲಿ ವಾಸ ಇರುವುದಿಲ್ಲ. ನನ್ನ ತಂದೆಯ ಹೆಸರು ಚಿಕ್ಕಹನುಮಯ್ಯ. ನನ್ನ ತಾತನ ಹೆಸರು ಹುಚ್ಚಯ್ಯ @ ಹುಚ್ಚ. ಹುಚ್ಚಯ್ಯ ರವರ ತಂದೆಯ ಹೆಸರು ಚಿನ್ನಯ್ಯ @ ಹನುಮ. ಸದರಿ ಚಿನ್ನಯ್ಯ ರವರಿಗೆ ಇಬ್ಬರು ಮಕ್ಕಳು. ಅವರುಗಳು ಹುಚ್ಚಯ್ಯ @ ಹುಚ್ಚ ಮತ್ತು ಕರೇಹನುಮಯ್ಯ @ ಕರೆಹನುಮ. ಸದರಿ ಹುಚ್ಚಯ್ಯ @ ಹುಚ್ಚ ರವರಿಗೆ ಮೂರು ಜನ ಮಕ್ಕಳು. ಅವರುಗಳು ವೆಂಕಟಹನುಮಯ್ಯ @ ವೆಂಕಟಹನುಮ, ಸಣ್ಣ ಹನುಮಯ್ಯ, ಚಿಕ್ಕಹನುಮಯ್ಯ. ಸದರಿ ಚಿಕ್ಕಹನುಮಯ್ಯ ನನ್ನ ತಂದೆ. ಅವರಿಗೆ ಸುಮಾರು 75-80 ವರ್ಷ ವಯಸ್ಸಾಗಿದೆ. ಚಿನ್ನಯ್ಯ ರವರು ದಿನಾಂಕಃ 04.08.1949 ರಂದು ಮರಣ ಹೊಂದಿರುತ್ತಾರೆ. ನನ್ನ ತಾತ ಹುಚ್ಚಯ್ಯ @ ಹುಚ್ಚ ರವರು ದಿನಾಂಕಃ 02.09.1950 ರಲ್ಲಿ ಮರಣ ಹೊಂದಿರುತ್ತಾರೆ. ಕರೇಹನುಮಯ್ಯ ರವರು ದಿನಾಂಕಃ 03.06.1955 ರಂದು ಮರಣ ಹೊಂದಿರುತ್ತಾರೆ. ವೆಂಕಟಹನುಮಯ್ಯ ರವರು ದಿನಾಂಕಃ 25.02.1951 ರಂದು ಮರಣ ಹೊಂದಿರುತ್ತಾರೆ. ಸಣ್ಣ ಹನುಮಯ್ಯ ರವರು ದಿನಾಂಕಃ 22.03.1993 ರಂದು ಮರಣ ಹೊಂದಿರುತ್ತಾರೆ. ಸದರಿ ನಿಖರವಾದ ಮರಣ ದಿನಾಂಕ ನನ್ನ ಅಣ್ಣ ರಮೇಶ್ ರವರು ದಾಖಲೆಗಳನ್ನು ಮಾಡಿಸಿರುತ್ತಾರೆ. ನನ್ನ ಅಣ್ಣ ರಮೇಶ್ ರವರು ಜೀವಂತ ಇಲ್ಲ. ಅವರು ದಿನಾಂಕಃ 03.11.2020 ರಂದು ಮರಣ ಹೊಂದಿರುತ್ತಾರೆ. ಆ ಕಾಲದಲ್ಲಿ ಅವರಿಗೆ ಸುಮಾರು 45-48 ವರ್ಷ ವಯಸ್ಸಾಗಿರುತ್ತದೆ.

ನಿಡಿ-9 ದಾಖಲೆಗಳನ್ನು ನಾನು ಹೇಳಿ ಬರೆಸಿರುತ್ತೇನೆ. ಸದರಿ ದಾಖಲೆಯಲ್ಲಿ ರಮೇಶ್ ರವರು ವಯಸ್ಸು ತೋರಿಸಿಲ್ಲ ಎಂದರೆ ಪೌತಿ ಆಗಿರುವ ಕಾರಣ ತೋರಿಸಿರುವುದಿಲ್ಲ. ಮರಣ ಪ್ರಮಾಣ ಪತ್ರಗಳನ್ನು 2012 ರಲ್ಲಿ ಪಡೆದಿರುತ್ತೇನೆ. ಯಾವ ಮೂಲಕ ಪಡೆದಿದ್ದಿರಾ

ಎಂದರೆ ನನ್ನ ಅಣ್ಣ ಕಂದಾಯ ಕಛೇರಿಯಿಂದ ಪಡೆರುತ್ತಾರೆ. 1950 ರಲ್ಲಿ ಆಗಿರುವ ಮರಣದ ಪ್ರಮಾಣ ಪತ್ರಗಳನ್ನು 2012 ರಲ್ಲಿ ಹೇಗೆ ಪಡೆದಿದ್ದಿರಾ ಎಂದರೆ ನನ್ನ ಅಣ್ಣ ಪಡೆದಿರುತ್ತಾರೆ. ಸದರಿ ದಾಖಲಗಳು 1-2 ದಿನಗಳ ಅಂತರದಲ್ಲಿ ಆಗಿದೆ ಎಂದರೆ ಸರಿ. ಮರಣ ಪ್ರಮಾಣ ಪತ್ರಗಳನ್ನು ದಿನಾಂಕಃ 14.02.2012 ರಂದು ನೀಡಿರುತ್ತಾರೆಂದರೆ ಸರಿ. ಅದರ ಪೂರ್ವದಲ್ಲಿ ನನ್ನ ತಾತ ಮತ್ತು ಮುತ್ತಾತ ರವರ ಮರಣ ಪ್ರಮಾಣ ಪತ್ರವನ್ನು ಪಡೆದಿದ್ದಿರಾ ಎಂದರೆ ನನ್ನ ಅಣ್ಣ ಮಾಡಿಸಿರುತ್ತಾರೆ. ನನ್ನ ಅಣ್ಣನ ಹತ್ತಿರ ಅದರ ವಿಚಾರ ಕೇಳಿದ್ದಿರಾ ಎಂದರೆ ಅವರು ಪೌತಿ ಆಗಿರುತ್ತಾರೆ. ನಾನು ಮತ್ತು ನನ್ನ ಅಣ್ಣ ಬೇರೆ ವಾಸ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ನಾರನಹಳ್ಳಿ ಗ್ರಾಮದ ಸರ್ವೆ ನಂ.24 ರಲ್ಲಿ ಇರುತ್ತದೆ. ಸದರಿ ಜಮೀನಿನ ಹಳೇ ಸರ್ವೆ ನಂಬರ್ 24. ಹೊಸ ಸರ್ವೆ ನಂಬರ್ 223, 224 ಆಗಿರುತ್ತದೆ. ಸಾಕ್ಷಿ ಮುಂದುವರೆದು ಮೂಲ ಸರ್ವೆ ನಂಬರ್ 24 ಹಾಗೇ ಇರುತ್ತದೆ. ದಾವಾ ಆಸ್ತಿಯ ಯಾವುದು ಎಂದು ನನಗೆ ಗೊತ್ತು. ದಾವೆಯನ್ನು ವಾದಿಗಳು ಸರ್ವೆ ನಂ.24, 223 ಮತ್ತು 224 ಜಮೀನುಗಳಿಗೆ ಸಲ್ಲಿಸಿರುತ್ತಾರೆ. ಸರ್ವೆ ನಂ.24 ರ ಒಟ್ಟು ವಿಸ್ತೀರ್ಣ 15 ಎಕರೆ 33 ಗುಂಟೆ ಪೋಡಿಯ ಮೊದಲು ಇರುತ್ತದೆ. ಈ ದಾವೆಯನ್ನು 15 ಎಕರೆ 33 ಗುಂಟೆಗೆ ಸಲ್ಲಿಸಿರುತ್ತಾರೆ. ವಾದಿಗಳು ಈ ದಾವೆಯನ್ನು ಸರ್ವೆ ನಂ.24, ಅದರ ಹೊಸ ಸರ್ವೆ ನಂ.224 ಜಮೀನಿನಲ್ಲಿ 4 ಎಕರೆ 31 ಗುಂಟೆಗೆ ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. 4 ಎಕರೆ 31 ಗುಂಟೆಯ ಚಕ್ಕುಬಂದಿ ನನಗೆ ಗೊತ್ತಿದೆ. ಸರ್ವೆ ನಂ.24 ರ ಪೂರ್ವಕ್ಕೆ ಸರ್ವೆ ನಂ.224, ಪಶ್ಚಿಮಕ್ಕೆ ಬೋರಪ್ಪನಹಳ್ಳಿ ರಸ್ತೆ, ಉತ್ತರಕ್ಕೆ ಬೋರಪ್ಪನಹಳ್ಳಿ ಗಡಿ, ದಕ್ಷಿಣಕ್ಕೆ ಸರ್ವೆ ನಂ.22 ಮತ್ತು 23.

(Further cross examination deferred at the request of counsel for the plaintiff )

(Typed to my dictation in open court)

R.O.I & A.C.

Addl. Senior Civil Judge and
JMFC., Gubbi